# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,</u>

# <u>ನಂಜನಗೂಡು</u>

**ಓ ಎಸ್ ನಂ. 99-2014** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮಹದೇವಪ್ಪ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 18-02-2022. |

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ವಕೀಲರಿಂದಃ</u>**

8. ಪ್ರತಿವಾದಿ ತಂದೆ ಹೆಸರು ಜವನಯ್ಯ ಹಾಗೂ ತಾಯಿ ಹೆಸರು ಕಾಳಮ್ಮ ಎಂದರೆ ಸರಿ. ಸಾಕ್ಷಿಗೆ ಈ ಒಂದು ಛಾಯಾ ಚಿತ್ರವನ್ನು ತೋರಿಸಲಾಗಿ ಆ ಛಾಯಾ ಚಿತ್ರದಲ್ಲಿರುವ ಎರಡೂ ಜಮೀನುಗಳ ಮಧ್ಯೆ ತೆವರಿ(ಬದು) ಇದೆ ಎಂದರೆ ಸರಿ ಎಂದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಪ್ರತಿವಾದಿ ನಿಂತಿರುವ ಜಮೀನಿನ ಸರ್ವೇ ನಂ.2/1 ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಮರ ಇರುವ ಜಮೀನು ನನ್ನ ಸೋದರತ್ತೆ ಸೊಸೆ ಮಹದೇವಮ್ಮಳಿಗೆ ಸೇರಿದ ಸ್ವತ್ತು ಎಂದರೆ ಸರಿ. ಅದರ ಸರ್ವೇ ನಂ.2/2 ಎಂದರೆ ನನಗೆ ಗೊತ್ತಿಲ್ಲ. ಸದರಿ ಮಹದೇವಮ್ಮಳ ಜಮೀನಿನ ದಕ್ಷಿಣಕ್ಕೆ ನುಗು ಜಲಾಶಯದ ಕಾಲುವೆ ಇದ್ದು, ಅದಾದ ನಂತರ ನನ್ನ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನುಗು ಜಲಾಶಯದ ಕಾಲುವೆಯ ಎರಡೂ ಕಡೆ ನನ್ನ ಜಮೀನು ಇದೆ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿ ಪ್ರತಿವಾದಿ ನಿಂತಿರುವ ಜಮೀನು ನಮ್ಮ ಜಮೀನು ಆಗಿರುತ್ತದೆ. ನಿಡಿ-1 ರಲ್ಲಿ ಪ್ರತಿವಾದಿ ನಿಂತಿರುವ ಪೂರ್ವಕ್ಕೆ ಕುಳ್ಳಪ್ಪನ ಜಮೀನು ಇದೆ ಎಂದರೆ ಸರಿ. ನಿಡಿ-1 ರಲ್ಲಿನ ಮಹದೇವಮ್ಮನ ಜಮೀನಿನ ಪೂರ್ವಕ್ಕೆ ಕಾಳಮ್ಮನ ಮಕ್ಕಳ ಜಮೀನು ಇದೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಪ್ರತಿವಾದಿ ನಿಂತಿರುವ ಜಮೀನಿನ ಜಮೀನಿನ ದಕ್ಷಿಣದಲ್ಲಿ ಬಿರ್ವಾಲ್ ನಾಲೆ ಇದೆ ಎಂದರೆ ಸರಿ. ಸದರಿ ಬಿರ್ವಾಲ್ ನಾಲೆ ಆದ ಮೇಲೆ ಕಾಳಮ್ಮನಿಗೆ ಸೇರಿದ ಸರ್ವೆ ನಂ.9/2 ರ ಜಮೀನು ಇದೆ ಎಂದರೆ ಸರಿಯಲ್ಲ.

9. ವಾದ ಪತ್ರ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಚಾರಗಳನ್ನು ನಾವು 3 ಜನ ವಾದಿಗಳು ಸೇರಿ ಹೇಳಿ ಬರೆಸಿರುತ್ತೇವೆ. ನಿಡಿ-1 ರಲ್ಲಿ ಕಾಣುವ ಮಹದೇವಮ್ಮನ ಜಮೀನು ನನ್ನ ಸೋದರ ಅತ್ತೆಗೆ ತನ್ನ ತಂದೆಯಿಂದ ಬಂದ ಜಮೀನು ಎಂದರೆ ಸರಿ. ನನ್ನ ಸೋದರತ್ತೆ ಜಮೀನು ನಿಡಿ-1 ರಲ್ಲಿ ಪ್ರತಿವಾದಿ ನಿಂತಿರುವ ಜಮೀನಿನ ಪಶ್ಚಿಮಕ್ಕೆ ಇದೆ ಎಂದರೆ ಸರಿ. ನಿಡಿ-1 ರಲ್ಲಿ ಪ್ರತಿವಾದಿ ನಿಂತಿರುವ ಜಮೀನಿನ ಉತ್ತರಕ್ಕೆ ವೀರಭದ್ರಪ್ಪನವರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-1 ರಲ್ಲಿ ಪ್ರತಿವಾದಿ ನಿಂತಿರುವ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿ ಇಲ್ಲದೇ ಇರುವುದರಿಂದ ಅದರ ಚೌತರ್ಫನ್ನು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಜಮೀನು ನನ್ನದೇ ನನ್ನ ಜಮೀನಿನಲ್ಲಿ ಪ್ರತಿವಾದಿ ನಿಂತಿದ್ದಾರೆ ಎಂದು ನುಡಿಯುತ್ತಾರೆ.

10.ಸಾಕ್ಷಿಗೆ ಈಗ ಮತ್ತೊಂದು ಛಾಯಾ ಚಿತ್ರ ತೋರಿಸಲಾಗಿದ್ದು ಆ ಛಾಯಾ ಚಿತ್ರದಲ್ಲಿ ಪ್ರತಿವಾದಿ ನಿಂತಿರುವ ಜಮೀನು, ಅದರಲ್ಲಿ ಕಾಣುವ ಗಿಡ-ಮರಗಳು ಹಾಗೂ ಪಂಪ್ ಸೆಟ್ ಪ್ರತಿವಾದಿ ಸೇರಿದ್ದು ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ಕಾಣುವ ಜಮೀನು ಸರ್ವೆ ನಂ.2/1 ಆಗಿದ್ದು ಅದರಲ್ಲಿರುವ ಪಂಪ್ ಸೆಟ್‌ನ್ನು(ಬೋರ್) ಕೊರೆಸಲು 1997 ರಲ್ಲೇ ಅವರು ಬ್ಯಾಂಕಿನಿಂದ ಸಾಲ ಪಡದಿದ್ದರು ಎಂದು ನನಗೆ ಗೊತ್ತಿಲ್ಲ.

11. ಬಸಪ್ಪನ ಮಗ ಬಿ.ವೀರಪ್ಪ ನಮ್ಮ ಗ್ರಾಮದವರು ಎಂದರೆ ಸರಿ. ಆದರೆ ಅವರು ನನಗೆ ಗೊತ್ತಿಲ್ಲ. 1965 ರಲ್ಲಿ ಪ್ರತಿವಾದಿ ತಾಯಿ ಕಾಳಮ್ಮ ಹಾಗೂ ಆಗ ಮೈನರ್ ಆಗಿದ್ದ ಪ್ರತಿವಾದಿ ಸರ್ವೆ ನಂ.2/1 ನ್ನು ಸದರಿ ಬಿ.ವೀರಪ್ಪನಿಗೆ ಭೋಗ್ಯ ಮಾಡಿದ್ದಳು ಎಂದರೆ ನನಗೆ ಗೊತ್ತಿಲ್ಲ. ಭೋಗ್ಯ ತೀರುವಳಿ ಮಾಡಿ, ಪ್ರತಿವಾದಿ ತಾಯಿ ಮರಣ ಹೊಂದಿದ ನಂತರ 1983-84 ರಲ್ಲಿ ಪ್ರತಿವಾದಿ ಸರ್ವೆ ನಂ.2/1 ನ್ನು ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಖಾತೆ ಬದಲಾವಣೆ ಮಾಡಿಸಿಕೊಂಡ ಮೇಲೆ ಅಭಿವೃದ್ಧಿ ಪಡಿಸಲೆಂದು ಹಲವು ಬ್ಯಾಂಕ್ ಗಳಿಂದ ಸಾಲ ಪಡೆದು ಅಭಿವೃದ್ಧಿ ಪಡಿಸಿ ಕುಟುಂಬ ಸಮೇತ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ.

12. ನಾನು ದಾವಾ ಸ್ವತ್ತಿನ ಖಾತೆಯನ್ನು ರದ್ದುಪಡಿಸಬೇಕು ಎಂದು ಹೇಳಿ ಎ.ಸಿ.ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ನಾನು ಪ್ರಶ್ನೇ ಮಾಡುವ ಹಕ್ಕನ್ನು ಕಳೆದುಕೊಂಡಿದ್ದೇನೆ, ಪ್ರತಿವಾದಿಯೇ ದಾವಾ ಸ್ವತ್ತಿನಲ್ಲಿ

ಸ್ವಾಧೀನದಲ್ಲಿ ಇದ್ದಾರೆ ಎಂದು ಹೇಳಿ ವಜಾ ಆಗಿದೆ ಎಂದರೆ ಸರಿಯಲ್ಲ. ಹಾಗಾದರೆ ನಿಮ್ಮ ವಾದ ಪತ್ರ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿನ ಎಂಆರ್ 10/1983-84 ನ್ನು ಪ್ರಶ್ನಿಸಿ ಎ.ಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದೇನೆ ಎಂದು ಬರೆಸಿರುತ್ತೀರಿ ಹಾಗಾದರೆ ಆ ವಿಷಯ ಸುಳ್ಳೋ ನಿಜವೋ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

13. ದಾವಾ ಹೂಡುವ ಮುಂಚೆ ದಾವಾ ಸ್ವತ್ತಿನ ಬಾಬ್ತು ನನ್ನ ಹಾಗೂ ಪ್ರತಿವಾದಿ ನಡುವೆ ಯಾವುದೇ ಗಲಾಟೆ ಇರಲಿಲ್ಲ. ನನ್ನ ಹಾಗೂ ಪ್ರತಿವಾದಿ ನಡುವೆ ದಾವಾ ಸ್ವತ್ತಿನ ಸಂಬಂಧ 2014 ರಲ್ಲಿ ಗಲಾಟೆ ಆದಾಗಾ ಗ್ರಾಮದಲ್ಲಿ ಪಂಚಾಯ್ತಿ ನಡೆಯಿತು, ಆಗ ಪಂಚಾಯ್ತಿಯವರು ಪ್ರತಿವಾದಿಗೆ ಬುದ್ದಿ ಹೇಳಿದ್ದರು. ನಾನೇ ಪ್ರತಿವಾದಿ ವಿರುದ್ದ ಪೊಲೀಸರಿಗೆ ದೂರು ನೀಡಿದ್ದೇನೆ. ಪೊಲೀಸರು ನಮ್ಮಿಬ್ಬರನ್ನು ಕರೆಯಿಸಿ ದಾಖಲೆಗಳನ್ನು ಪರಿಶೀಲಿಸಿ ಗಲಾಟೆ ಮಾಡಿಕೊಳ್ಳಬೇಡಿ ಎಂದು ಬುದ್ದಿ ಹೇಳಿದ್ದರು. ಪೊಲೀಸರು ದಾವಾ ಸ್ವತಿನಲ್ಲಿ ಪ್ರತಿವಾದಿಯೇ ಸ್ವಾಧೀನದಲ್ಲಿ ಇದ್ದಾನೆ ಆ ರೀತಿ ಸ್ವಾಧೀನಕ್ಕೆ ಅಡ್ಡಪಡಿಸಿಸಬಾರದು ಎಂದು ಹೇಳಿ ಪೊಲೀಸರು ನನಗೆ ಬುದ್ದಿ ಹೇಳಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು, ಸ್ವಾಧೀನ ಹಾಗೂ ಮಲೀಕತ್ವ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ್ ನಲ್ಲಿ 1 ಎಕರೆ 4 ಗುಂಟೆ ಜಮೀನಿನಲ್ಲಿ ಮಾತ್ರ ಸ್ವಾಧೀನದಲ್ಲಿ ಇದ್ದೇನೆ ಎಂದರೆ ಸರಿಯಲ್ಲ.ನಾನು ದಾವಾ ಸ್ವತ್ತಿನ ಪೂರ್ತಾ ವಿಸ್ತೀರ್ಣ 7 ಎಕರೆ 20 ಗುಂಟೆ 6 ಎಕರೆ ಯಲ್ಲಿ ಸ್ವಾಧೀನದಲ್ಲಿ ಇದ್ದೇನೆ ಎಂದು ನುಡಿಯುತ್ತಾರೆ.

14 ದಾವಾ ಸರ್ವೆ ನಂಬರ್ 2 ಪೋಡು ಆಗಿದೆ ಎಂದರೆ ಸರಿ. ಸತ್ಯ ಹೊರಬರುತ್ತದ ಎಂಬ ಕಾರಣದಿಂದ ದಾವಾ ಸರ್ವೆ ನಂಬರ್ 2 ಪೋಡು ಆಗಿರುವ ವಿಷಯವನ್ನು ನನ್ನ ವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ 2 2/1 ಹಾಗೂ 2/2 ಎಂದು ಪೋಡು ಆಗಿದೆ ಎಂದರೆ ಸರಿ. ನಿಪಿ-3 ರಂತೆ ಸರ್ವೆ ನಂಬರ್ 2/1 1 ಎಕರೆ 18 ಗುಂಟೆ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ನಿಪಿ-4 ಆರ್.ಟಿ.ಸಿ ಸರ್ವೆ ನಂಬರ್.2/2 ಯಾರ ಹೆಸರಿನಲ್ಲಿ ಇದ ಎಂದು ನನಗೆ ಗೊತ್ತಿಲ್ಲ. ನಿಪಿ-4 ರಲ್ಲಿ ಸರ್ವೆ ನಂ.2/2 ರಲ್ಲಿ 1 ಎಕರೆ 20 ಗುಂಟೆ ಮಹದೇವಮ್ಮಳ ಹೆಸರಿನಲ್ಲಿ ಇದೆ ಎಂದರೆ ಸರಿ ಹಾಗೂ 1 ಎಕರೆ 4 ಗುಂಟೆ ಕಾಳಿಂಗಯ್ಯನ ಮಗ ಚೆನ್ನಯ್ಯನ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 2/2 ನಾನೇ ವ್ಯವಸಾಯ ಮಾಡುತ್ತಿದ್ದೇನೆ. ದಾವಾ ಸರ್ವೆ ನಂಬರ್ 2 ರ ಜಮೀನು ನುಗು ಜಲಾಶಯಕ್ಕೆ ಸ್ವಾಧೀನ ಆದ ಮೇಲೆ ಉಳಿದ ಜಮೀನು 2/1 ಹಾಗೂ 2/2 ಎಂದು ಪೋಡಾಗಿದ್ದು ಸರ್ವೆ ನಂಬರ್ 2/2 ರಲ್ಲಿ ನಾನು ಸ್ವಾಧೀನದಲ್ಲಿ ಇದ್ದೇನೆ ಎಂದರೆ ಸರಿ. ನನ್ನ ತಾತ

ಕಾಳಿಂಗಯ್ಯ ಹಾಗೂ ಚೆನ್ನಯ್ಯ ಸರ್ವೆ ನಂ.2/2 ರಲ್ಲಿ ಭೂ ಪರಿಹಾರ ಪಡೆದಿದ್ದಾರೆ ಹಾಗೂ ಸರ್ವೇ ನಂ.2/1 ರಭೂ ಪರಿಹಾರವನ್ನು ಪ್ರತಿವಾದಿ ತಂದೆ ಜವನವಯ್ಯ ಪಡೆದಿದ್ದಾರೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**